ಶ್ರೀ ಎನ್. ಎಂ. ಅಡ್ಯಂತಾಯ.—ಶ್ರೀ ಹೆಮ್ಮಿಗೆಯವರು ಪ್ರಮುಖವಾದಂಥ ಪ್ರಶ್ನೆ ಎತ್ತಿದ್ದಾರೆ. ಅವರಿಗೆ ಸರಿಯಾದ ಉತ್ತರ ಬಂದಿಲ್ಲ. ಶ್ರೀ ಹೆಮ್ಮಿಗೆಯವರಿಗೆ ನಾನು ಸಂಪೂರ್ಣ ಸಹಕಾರ ವನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರತಾಪಚಂದ್ರು ಶೆಟ್ಟಿಯವರು ಮುಂದಿನ ಪ್ರಶ್ನೆ ಕೇಳಬಹುದು.

ಮಂಜರಾಯಿ ದೇವಸ್ಥಾನಗಳ ಆಸ್ತಿ

೧೨೩೬. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ದೇವಸ್ಥಾನಗಳು ಹಾಗೂ ಇನ್ನಿತರ ಧಾರ್ಮಿಕ ದತ್ತಿ ಸಂಸ್ಥೆಗಳು ಯಾವುವು (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಧಾರ್ಮಿಕ ಸಂಸ್ಥೆಗಳು ಹೊಂದಿರುವ ಆಸ್ತಿಯ ಪಟ್ಟಿ ಹಾಗೂ ಅವುಗಳ ಪರಿಸ್ಥಿತಿ

ಇ) ನ್ಯಾಯಾಲಯಗಳಲ್ಲಿ ಮುಂದಿರುವ ಈ ಧಾರ್ಮಿಕ ಸಂಸ್ಥೆಗಳ ಆಸ್ತಿ ವಿವಾದಗಳ ಸಂಖ್ಯೆ ಎಷ್ಟು ?

ಶ್ರೀ ಕೆ. ಅಮರನಾಥ್ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ರಾಜ್ಯಮಂತ್ರಿಗಳು).—

ಅ) ರಾಜ್ಯದಲ್ಲಿ ಮುಜರಾಯಿ ಆಡಳಿತಕ್ಕೆ ಒಳಪಟ್ಟಿರುವ ಒಟ್ಟು ಸಂಸ್ಥೆಗಳ ಸಂಖ್ಯೆ ೪೧೬೦. ಜಿಲ್ಲಾವಾರು ಸಂಸ್ಥೆಗಳ ವಿವರ ಪಟ್ಟಿ ಲಗತ್ತಿಸಿದೆ. ಇನ್ನಿತರ ಧಾರ್ಮಿಕ ಸಂಸ್ಥೆಗಳು ಯಾವುವು ಎಂಬುದರ ಬಗ್ಗೆ ವಿವರ ಲಭ್ಯವಿರುವುದಿಲ್ಲ.

ಆ)		ಎ.	ಗು	ಅಂದಾಜು ಮೌಲ್ಯ
೧	ಇನ್ನು ಉಳಿದ ಕೃಷಿ ಭೂಮಿ	೬೧೫೯	೨೫	೨,೪೬,೮೨,೦೦೦-೦೦
೨	ನಗರ ನಿವೇಶನಗಳು	೭೪		ಅಂದಾಜು ಮಾಡುವುದು ಕಷ್ಟಸಾಧ್ಯ
೩	ಕಟ್ಟಡಗಳು	೪೧೭		ಅಂದಾಜು ಮಾಡುವುದು ಕಷ್ಟಸಾಧ್ಯ
೪	ಒಡವೆಗಳು	೧೧೦೦೯		೬,೨೪,೯೩,೨೪೬-೬೪

ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ.

ಇ) ವಿವಿಧ ನ್ಯಾಯಾಲಯಗಳಲ್ಲಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ. ೧೩೩ ಇರುತ್ತದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಂಸ್ಥೆಗಳ ಸಂಖ್ಯೆ	ಆಸ್ತಿಯ ವಿವರ				ಒಡವೆಗಳ ಅಂದಾಜು ಬೆಲೆ		ಪರಾ
			ಕೃಷಿ ಭೂಮಿ	ಅಂದಾಜು ಬೆಲೆ	ನಿವೇಶನಗಳು	ಕಟ್ಟಡಗಳು	ಸಂಖ್ಯೆ	ರೂ. ಪೈ.	
೧	೨	೩	೪	೫	೬	೭	೮	೯	೧೦
೧	ಬೆಂಗಳೂರು ಗ್ರಾಮೀಣ	೨೦೮೬	–	–	–	–	೧೮೨೬	೧,೬೮,೮೭೯–೦೦	
೨	ಬೆಂಗಳೂರು ನಗರ	೧೦೮೪					೨೧೯೪	೫೫,೯೭,೦೬೮–೦೦	
೩	ಬೆಳಗಾಂ	೪೪೫೮							
೪	ವಿಜಾಪುರ	೨೧೩೮					ತಿಳಿಸಿಲ್ಲ	೨೯,೪೬,೫೪೬–೦೦	
೫	ಧಾರವಾಡ	೩೭೭೯							
೬	ಕಾರವಾರ	೧೦೧೮							
೭	ಬಳ್ಳಾರಿ	೬೧೨			೮.೨೮ಸೆಂಟ್ಸ್	೫೦	೪೩೬	೪,೨೭,೦೬೭–೦೦	
೮	ಬೀದರ್	೧೦೭೨	೫೬೨೩.೧	೧,೦೪,೯೨,೦೦೦.	–	೪೨	–	–	
೯	ಕೊಡಗು	೧೦	–	–	–	–	–	೧೦,೦೦,೦೦೦–೦೦	
೧೦	ಚಿತ್ರದುರ್ಗ	೫೩೩	೪.೧೭	೭,೮,೦೦೦	೨	೧೦	ತಿಳಿಸಿಲ್ಲ	೧೬,೪೫,೨೯೮–೦೦	
೧೧	ಚಿಕ್ಕಮಗಳೂರು	೮೧೮	೧೯.೩೬	೨,೦೦,೦೦೦	–	೩೫	,,	೨೩,೨೭,೫೦೨–೦೦	
೧೨	ಗುಲ್ಬರ್ಗ	೩೫೯೬	–	–	–	೭೬	ಚಿನ್ನ೩೩೧೪ಗ್ರಾಂ ಬೆಳ್ಳಿ೩೬೯೫ಗ್ರಾಂ	೧೧,೨೩,೦೦೨–೦೦	
೧೩	ಹಾಸನ	೨೫೮೩	–	–	೬	೩೩	–	೧೯,೦೨,೧೧೬–೬೪	
೧೪	ಕೋಲಾರ	೨೩೯೭	–	–	–	೫೧	–	೧,೮೩,೬೧,೮೩೫–೦೦	
೧೫	ಮಂಡ್ಯ	೧೯೧೩	–	–	೨೩	೪	–	೭೧,೩೪,೯೬೪–೦೦	
೧೬	ಮೈಸೂರು	೧೭೨೨	–	–	–	೪	೯೪೫	೧,೩೦,೧೩,೦೦೨–೦೦	
೧೭	ದಕ್ಷಿಣ ಕನ್ನಡ	೨೨೦೮	ಇಲ್ಲ	–	–	–	ತಿಳಿಸಿಲ್ಲ	–	
೧೮	ಶಿವಮೊಗ್ಗ	೧೩೯೪	–	–	–	–	–	೨೩,೦೫,೨೬೫–೦೦	
೧೯	ರಾಯಚೂರು	೪೭೭೯	೩೪೫೨೧.೨೪	೧,೩೮,೧೦,೦೮೦	–	೨	–	೮.೨೨,೫೨೨–೦೦	
೨೦	ತುಮಕೂರು	೨೫೭೬	೩೯.೨೫	೧,೦೦,೦೦೦	೪೧	೫೯	೫,೬೦೪	೧,೦೬,೫೮,೧೭೬–೦೦	
		೪೦೭೪೦	೬೧೩೯ ೨೩	೨,೪೬,೪೦,೦೦೦	೭೪	೪೧೭	೧೧.೦೦೯	೬,೨೪,೯೩,೨೪೬–೬೪	

ಶ್ರೀ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಆ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಉಳಿದ ಕೃಷಿ ಭೂಮಿ ೬೧೩೯ ಎಕರೆ ಎಂದು ಹೇಳಿದ್ದಾರೆ. ಹಾಗಿದ್ದರೆ ಮುಂಚೆ ಇದ್ದಂಥ ಭೂಮಿ ಎಷ್ಟು ? ಭೂ ಸಂಧಾರಣಾ ಪಂಸೂದೆ ಬರುವುದಕ್ಕಿಂತ ಮುಂಚೆ ಎಷ್ಟು ಭೂಮಿ ಇತ್ತು. ೧೯೭೪ರ ನಂತರ ಭೂ ಸಂಧಾರಣಾ ಪಂಸೂದೆಯಿಂದ ಹೆಚ್ಚುವರಿ ಭೂಮಿ ಪಾಜಿ ಗೇಣಿದಾರರಿಗೆ ಹೋಗಿದೆ. ಅದರಿಂದ ಪರಿಹಾರ ಬಂದಂಥ ಹಣ ಎಷ್ಟು ? ಆ ಪರಿಹಾರದ ಹಣವನ್ನು ತಾವು ತೆಗೆದುಕೊಂಡಿದ್ದೀರಾ? ನಗರಗಳಲ್ಲಿ ೭೪ ನಿವೇಶನಗಳು ಇವೆ ಎಂದು ಹೇಳಿದ್ದೀರಿ, ಅದನ್ನು ಯಾವುದಾದರೂ ಹೋಟೆಲ್‌ಗೆ ಲೀಸ್ ಕೊಟ್ಟಿದ್ದು ಇದೆಯೇ? ತಾವು ಬಂದ ನಂತರ ಲಿಫ್ಟಾ ಬರುವುದಕ್ಕಿಂತ ಮುಂಚೆ ಕೊಟ್ಟಿದ್ದು ಇದೆಯೇ ? ೪೧೭ ಕಟ್ಟಡಗಳು ಇವೆ ಎಂದು ಹೇಳಿದ್ದೀರಿ. ಆ ಕಟ್ಟಡಗಳಿಂದ ಬಾಡಿಗೆ ಏನಾದರೂ ಬರುತ್ತಿದೆಯೇ? ಎಷ್ಟು ಬರುತ್ತಿದೆ? ಇವುಗಳ ಬೆಲೆಯನ್ನು ಅಂದಾಜು ಮಾಡುವುದು ಕಷ್ಟ ಎಂದು ತಿಳಿಸಿದ್ದೀರಿ. ಸರಕಾರಕ್ಕೇ ಕಟ್ಟಡಗಳು ಮತ್ತು ನಿವೇಶನಗಳ ಬೆಲೆಯನ್ನು ಅಂದಾಜು ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಬೇರೆಯವರು ಮಾಡುವುದಕ್ಕೆ ಕಷ್ಟವಾಗುತ್ತದೆ. ವೈಯಕ್ತಿಕವಾಗಿ ತಾವು ಈ ವಿಚಾರ ಪರಿಶೀಲನೆ ಮಾಡಬೇಕಾಗುತ್ತದೆ. ನ್ಯಾಯಾಲಯಗಳಲ್ಲಿರತಕ್ಕಂಥ ಪ್ರಕರಣಗಳು ೧೩೩ ಎಂದು ಹೇಳಿದ್ದೀರಿ. ಮತ್ತು ಆ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ ಎಂದು ಹೇಳಿದ್ದೀರಿ. ಆದರೆ ಇಲ್ಲಿ ಜಿಲ್ಲಾವಾರು ಮಾಹಿತಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಶಾಲೆಗಳಿಗಿಂತ ಗುಡಿಗಳೇ ಜಾಸ್ತಿಯಾಗಿವೆ. ಗುಡಿಗಳು ಇರುವುದು ಸುಮಾರು ೪೦ ಸಾವಿರವಾದರೆ, ಶಾಲೆಗಳು ಇರುವುದೇ ೩೨ ಸಾವಿರ ಮಾತ್ರ.

ಶ್ರೀ ಕೆ. ಅಮರನಾಥಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನ್ಯಾಯಾಲಯಗಳಲ್ಲಿರತಕ್ಕಂಥ ಪ್ರಕರಣಗಳು ೧೩೩ ಎಂದು ಹೇಳಿದ್ದೇನೆ. ಇದರಲ್ಲಿ ರಿಟ್ ಪಿಟಿಶನ್ಸ್ ೨೫ ಇವೆ. ಸಿವಿಲ್ ಕೋರ್ಟ್‌ನಲ್ಲಿ ಸುಮಾರು ೩೦ ಪ್ರಕರಣಗಳು ಇವೆ. ಕರ್ನಾಟಕ ಅಪಿಲೇಟ್ ಟ್ರಿಬ್ಯುನಲ್‌ನಲ್ಲಿ ೩೬ ಕೇಸ್‌ಗಳು ಇವೆ. ಸತ್ರನ್ಯಾಯಾಲಯದಲ್ಲಿ ಸುಮಾರು ೪೨ ಕೇಸಂಗಳು ಇವೆ. ಮತ್ತು ನಗರಪ್ರದೇಶಗಳಲ್ಲಿರತಕ್ಕ ನಿವೇಶನಗಳು ಸುಮಾರು ೭೪ ಇವೆ. ಕಟ್ಟಡಗಳು ನಗರಪ್ರದೇಶಗಳಲ್ಲಿ ಸುಮಾರು ೪೧೭ ಇವೆ. ಈ ಬಗ್ಗೆ ಅಂದಾಜು ವಿವರಗಳು ಈಗ ಸದ್ಯದಲ್ಲಿ ಇಲ್ಲ, ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದೇನೆಂದರೆ ನಗರಪ್ರದೇಶಗಳಲ್ಲಿ ಇರತಕ್ಕಂಥ ನಿವೇಶನಗಳನ್ನು ಯಾರಿಗಾದರೂ ಲೀಜ್‌ಗೆ ಕೊಟ್ಟಿದ್ದೀರಾ ಹೇಗೆ? ಲೀಜ್‌ಗೆ ಕೊಟ್ಟಿರುವ ಅವಧಿ ಎಷ್ಟು ? ಈ ಬಗ್ಗೆ ಯಾರಾದರೂ ಕೋರ್ಟಿಗೆ ಹೋಗಿದ್ದಾರಾ ಹೇಗೆ? ಮತ್ತು ಕಟ್ಟಡಗಳಿಂದ ಬಾಡಿಗೆ ಎಷ್ಟು ಬರುತ್ತದೆ? ಬಾಡಿಗೆಗೆ ಈ ಕಟ್ಟಡಗಳನ್ನು ಕೊಟ್ಟಿದ್ದೀರಾ ಹೇಗೆ ?

ಶ್ರೀ ಕೆ. ಅಮರನಾಥಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಮುಂಚೆ ಈ ನಿವೇಶನಗಳನ್ನು ಲೀಜ್‌ಗೆ ಕೊಟ್ಟಿದ್ದಾರೆ. ಲೀಜ್ ಅವಧಿ ಕೆಲವು ಕಡೆ ಮುಗಿದಿದೆ ಕೆಲವು ಕಡೆ ಮುಗಿದಿಲ್ಲ. ಅವರಿಗೆ ನಾವು ಇನ್ನು ಮುಂದೆ ಹೊಸ ರೆಂಟ್ ಕೊಡಬೇಕೆಂದು ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಸಾಕು ಕುಳಿತುಕೊಳ್ಳಿ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಇದು ಬಹಳ ಮುಂಖ್ಯವಾದ ಪ್ರಶ್ನೆ ಮಾನ್ಯ ಅಧ್ಯಕ್ಷರೇ, ಕೃಷಿ ಭೂಮಿಯ ಪಾಜಿ ಗೇಣಿದಾರರು ಯಾರಾದರೂ ಡಿಕ್ಲರೇಶನ್ ಆರ್ಜಿ ಹಾಕಿ ಕೋರ್ಟಿಗೆ ಹೋಗಿದ್ದಾರೇ ಹೇಗೆ? ಅವರಿಗೆ ಅಲ್ಲಿ ಪರಿಹಾರ ಸಿಕ್ಕಿತೆ, ಇಲ್ಲವೇ ಪರಿಹಾರ ಕೊಟ್ಟಿದ್ದರೆ ಎಷ್ಟು ಜನರಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಕೆ. ಅಮರನಾಥ ಶೆಟ್ಟಿ.— ಮಾಹಿತಿ ಇದ್ದಂತಹ ಜಮೀನುದಾರರಿಗೆ ಪರಿಹಾರ ಕೊಡಲಾಗಿದೆ.

ಶ್ರೀ ಪ್ರತಾಪಚಂದ್ರಶೆಟ್ಟಿ.— ಪಾಜಿ ಗೇಣಿದಾರರಿಗೆ ಪರಿಹಾರ ಎಷ್ಟು ಹಣ ಕೊಟ್ಟಿದ್ದೀರಿ? ಪರಿಹಾರ ಕೊಟ್ಟಿದ್ದೇವೆಂದು ಹಾರಿಕೆ ಉತ್ತರ ಕೊಟ್ಟರೆ ಹೇಗೆ? ಪರಿಹಾರ ಪಡೆಯದೆ ಇನ್ನೂ ಯಾರಾದರೂ ಬಾಕಿ ಇದ್ದಾರೆಯೇ?

ಶ್ರೀ ಕೆ. ಅಮರನಾಥಶೆಟ್ಟಿ.— ಡಾಕ್ಯುಮೆಂಟ್ ಕೊಟ್ಟಿದ್ದವರಿಗೆ ಪರಿಹಾರ ಕೊಟ್ಟಿದ್ದಾರೆ, ಡಾಕ್ಯುಮೆಂಟ್ಸ್ ಕೊಡದೆ ಇರುವವರಿಗೆ ಪರಿಹಾರ ಕೊಟ್ಟಿಲ್ಲ.

ಶ್ರೀ ಪ್ರತಾಪಚಂದ್ರಶೆಟ್ಟಿ.— ಬೆಳಗಾಂ ಜಿಲ್ಲೆಯಲ್ಲಿ ಸುಮಾರು ಳಳಿಜಿ ದೇವಸ್ಥಾನಗಳು ಗುಲ್ಬರ್ಗ ಜಿಲ್ಲೆಯಲ್ಲಿ ೩೫೯೬ ದೇವಸ್ಥಾನಗಳು ಇವೆ. ಅದೇ ರೀತಿ ೨೦ ಜಿಲ್ಲೆಗಳಲ್ಲಿರತಕ್ಕಂಥ ಎಲ್ಲಾ ದೇವಸ್ಥಾನಗಳಿಗೂ ಪ್ರವಾಸ ಮಾಡಿದ್ದೀರಾ ಹೇಗೆ ಅಥವಾ ವರ್ಷದ ೩೬೫ ದಿವಸವೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಪ್ರವಾಸ ಮಾಡಿದ್ದೀರಾ ಹೇಗೆ ಎಂಬುದನ್ನು ತಿಳಿಸಬೇಕು?

ಶ್ರೀ ಕೆ. ಅಮರನಾಥಶೆಟ್ಟಿ.— ಬಹುತಃ ನಾನು ಹೋದಷ್ಟು ದೇವಸ್ಥಾನಗಳಿಗೆ ತಾವು ಹೋಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ದೇವಸ್ಥಾನಗಳಿಗೂ ಹೋಗಿದ್ದೇನೆ ಬೇರೆ ಜಿಲ್ಲೆಯ ದೇವಸ್ಥಾನಗಳಿಗೂ ಹೋಗಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ತಾವು ನಾಲ್ಕು ಸಾರಿ ಪ್ರಶ್ನೆ ಕೇಳಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. ಬೇಕಾದರೆ ತಾವು ಅರ್ಧ ಗಂಟೆಯ ಚರ್ಚೆಗೆ ನೋಟೀಸ್ ಕೊಡಿ ನೋಡೋಣ.

ಅಧ್ಯಕ್ಷರು.— ಪ್ರಶ್ನೆ ಸಂಖ್ಯೆ. ೨೭೪(೧೨೫೩) ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

ಹೊನ್ನಾಳಿ ತಾಲ್ಲೂಕಿನಲ್ಲಿ ಬರಗಾಲ

೧೦೯೯. ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಸಂವರೆ?

ಅ) ಹೊನ್ನಾಳಿ ತಾಲ್ಲೂಕು ಸತತವಾಗಿ ನಾಲ್ಕು ವರ್ಷಗಳಿಂದ ಬರಗಾಲದ ಬವಣೆಗೆ ತುತ್ತಾಗಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊನ್ನಾಳಿ ತಾಲ್ಲೂಕಿನಲ್ಲಿ ಕಳೆದ ವರ್ಷ ಬರಗಾಲಕ್ಕೆ ತುತ್ತಾದ ಗ್ರಾಮಗಳ ಸಂಖ್ಯೆ ಎಷ್ಟು?

ಇ) ಪರಿಹಾರದ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ೧೬೮

ಇ) ಉದ್ಯೋಗ ಸೃಜನೆ, ಕುಡಿಯುವ ನೀರಿನ ಸುಧಾರಣೆ ಅಥವಾ ಪೂರೈಕೆ ಮತ್ತು ಮೇವು ಪೂರೈಕೆ, ಕೃಷಿ ಬೀಜ ವಿತರಣೆ, ಕಂದಾಯ ಮನ್ನಾ ಮುಂದೂಡುವಿಕೆ ಮುಂತಾದ ಕೆಲವು ವಿಶೇಷ ಕ್ರಮಗಳನ್ನು ಕೈಗೊಂಡಿದೆ.

೧೧.೦೦ ಎ.ಎಂ.

ಶ್ರೀ ಡಿ.ಜಿ. ಬಸವನ ಗೌಡ.— ಮಾನ್ಯ ಅಧ್ಯಕ್ಷರೇ, ಹೊನ್ನಾಳಿ ತಾಲ್ಲೂಕಿನಲ್ಲಿ ಸತತವಾಗಿ ೪ ವರ್ಷಗಳಿಂದ ಬರಗಾಲ ಕಾಣುತ್ತಿದೆ. ಆದರೆ, ಬರಗಾಲ ಪರಿಹಾರ ಕಾಮಗಾರಿಗಳು ಸ್ಥಗಿತಗೊಂಡಿವೆ. ಇನ್ನು ಪಂಡಾದರೂ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೆಗೆದುಕೊಂಡು ಬಡ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಹೊನ್ನಾಳಿ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳನ್ನು ಕೈಗೊಂಡು ಸಣ್ಣ ರೈತರುಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಪ್ರತಿ ದಿನ ಹೊನ್ನಾಳಿ ತಾಲ್ಲೂಕಿನಲ್ಲಿ ೧೨,೫೬೧ ಜನ ಕೂಲಿ ಕಾರ್ಮಿಕರಿಗೆ ಕೆಲಸ ಕೊಟ್ಟಿದ್ದೇವೆ. ಆ ತಾಲ್ಲೂಕಿನಲ್ಲಿ ಒಂದು ಸಾರಿ ೩೪ ಸಾವಿರ ರೂಪಾಯಿಗಳ ಕಂದಾಯ ಮನ್ನಾ ಮಾಡಿದ್ದೇವೆ. ಇನ್ನೊಂದು ಸಾರಿ ೧೬ ಸಾವಿರ ರೂಪಾಯಿ